(ಇ ಮತ್ತು ಈ) ಶರಾವತಿ ಟೇಲ್ ರೇಸ್ ಯೋಜನೆಯ ನಿಗಮದ ವಸಾಹತುವಿನ ಸಮೀಪದಲ್ಲಿರುವ ಗೇರುಸೊಪ್ಪ ಗ್ರಾಮದಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ ಇರುತ್ತದೆ.

ಸದರಿ ಪ್ರೌಢಶಾಲೆಗೆ ಜಿಲ್ಲಾ ಪಂಚಾಯತ್, ಕಾರವಾರ ಇವರ ವತಿಯಿಂದ ಅಭಿವೃದ್ಧಿ ಅಥವಾ ಇತರೇ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.

ಆದಾಗ್ಯೂ ಪ್ರೌಢಶಾಲೆಗೆ ಗಣಕಯಂತ್ರದ ಕೊಠಡಿ, ಆಟದ ಮೈದಾನ ಹಾಗೂ ಶಾಲಾ ಕಾಂಪೌಂಡ್ ಒದಗಿಸಬೇಕೆಂದು ಇತ್ತೀಚೆಗೆ ಕೋರಿಕೆ ಬಂದಿರುತ್ತದೆ. ಸದರಿ ಕೋರಿಕೆಯನ್ನು ಮುಖ್ಯ ಅಭಿಯಂತರು ಕಾಮಗಾರಿ (ಶರಾವತಿ)ರವರು ಪರಿಶೀಲಿಸುತ್ತಿರುತ್ತಾರೆ.

844(1454) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವೇಶ್ವರ ಜನ್ಮಭೂಮಿ ಬಸವನ ಬಾಗೇವಾಡಿಯನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಡಿ ಸೇರಿಸಲಾಗಿದೆಯೇ;

ಆ) ಪ್ರಾದಿಕಾರದಿಂದ ಬಸವನಬಾಗೇವಾಡಿಯಲ್ಲಿ ಯಾವಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಇ) ಪ್ರಾಧಿಕಾರದಿಂದ ಇವುಗಳಿಗೆ ಒದಗಿಸಿದ ಅನುದಾನ ಎಷ್ಟು?

ಈ) ಯಾವ ನಿರ್ಧಿಷ್ಟ ಕಾಲಮಿತಿ ಹಾಕಿಕೊಂಡು ಪ್ರಾಧಿಕಾರವು ಬಸವನ ಬಾಗೇವಾಡಿಯನ್ನು ಅಭಿವೃದ್ಧಿಪಡಿಸುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) – ಹೌದು –

ಆ) ಬಸವನ ಬಾಗೇವಾಡಿ ಪಟ್ಟಣದಲ್ಲಿ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1) ಬಸವ ಸಾಂಸ್ಕೃತಿಕ ಕೇಂದ್ರದ ಕಟ್ಟಡ ನಿರ್ಮಾಣ.

2) ಬಸವೇಶ್ವರ ದೇವಸ್ಥಾನದ ಸಂಕೀರ್ಣದಲ್ಲಿ 63 ಅಂಗಡಿ ಮಳಿಗೆಗಳ ಮತ್ತು ಉಪಹಾರ ಗೃಹಗಳ ನಿರ್ಮಾಣ.

3) ದೇವಸ್ಥಾನದ ಪಕ್ಕದಲ್ಲಿ ಅಂದಾಜು 2.00 ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಕಾಮಗಾರಿ. ಬಸವ ಸಾಂಸ್ಕೃತಿಕ ಕೇಂದ್ರದಿಂದ ವಿಜಾಪೂರ ಮುದ್ದೇಬಿಹಾಳ ಮುಖ್ಯ ರಸ್ತೆಯವರೆಗೆ ಒಂದು ಸಂಪರ್ಕ ರಸ್ತೆ ನಿರ್ಮಾಣ ಇದರಲ್ಲಿ 51 ಮನೆಗಳ ಹಾಗೂ ಖಾಲಿ ನಿವೇಶನಗಳನ್ನು ಒದಗಿಸುವುದು ಮತ್ತು ಸಂಪರ್ಕ ರಸ್ತೆ ಕಲ್ಪಿಸಿಕೊಡುವುದು.

ಇ) ಈ ಮೇಲಿನ ಕಾಮಗಾರಿಗಳಿಗಾಗಿ ಅಂದಾಜು ರೂ. 3.00 ಕೋಟಿ ವೆಚ್ಚ ತಗಲುವುದು, ಇದುವರೆಗೆ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿವೆ.

1) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ	ರೂ. 18.00 ಲಕ್ಷ.
2) ಲೋಕಸಭಾ ಸದಸ್ಯರ ವಂತಿಗೆ	ರೂ. 25.00 ಲಕ್ಷ.
	ರೂ. **43.00** ಲಕ್ಷ

ಈ) ಸಂಪನ್ಮೂಲ ಸಂಗ್ರಹಣೆಯನ್ನಾಧರಿಸಿ ಹೆಚ್ಚಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

845(1455) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ಮತ್ತು ಬಸವನಬಾಗೇವಾಡಿ ತಾಲ್ಲೂಕುಗಳಲ್ಲಿ 220 ಕೆ.ವಿ. 110 ಕೆ.ವಿ. ಹಾಗೂ 33 ಕೆ.ವಿ. ಸ್ಟೇಷನ್‌ಗಳು ಈಗಾಗಲೇ ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ

ಆ) ಈ ತಾಲ್ಲೂಕುಗಳ ಯಾವ ಯಾವ ಕಡೆಗಳಲ್ಲಿ ಹೊಸದಾಗಿ 110 ಕೆ.ವಿ. ಹಾಗೂ 33 ಕೆ.ವಿ. ಸ್ಟೇಷನ್‌ಗಳನ್ನು ಮಂಜೂರು ಮಾಡಲಾಗಿದೆ;

ಇ) ಮಂಜೂರಾಗಿರುವಂತಹ ಈ ಕಾಮಗಾರಿಗಳು ಯಾವ ಹಂತದ ಪ್ರಗತಿಯಲ್ಲಿವೆ;

ಈ) ಸದರಿ ತಾಲ್ಲೂಕುಗಳಲ್ಲಿ ಯಾವ ಕಡೆಗಳಲ್ಲಿ ಹೊಸದಾಗಿ 110 ಕೆ.ವಿ ಮತ್ತು 33 ಕೆ.ವಿ ಸ್ಟೇಷನ್‌ಗಳನ್ನು ಮಂಜೂರು ಮಾಡಲು ಪ್ರಸ್ತಾವನೆಗಳು ಸರ್ಕಾರದ ಮುಂದಿರುತ್ತವೆ.

ಉ) ಅವುಗಳ ಮಂಜೂರಾತಿಗಾಗಿ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬಿಜಾಪುರ ಮತ್ತು ಬಸವನ ಬಾಗೇವಾಡಿ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 220 ಕೆ.ವಿ. 110 ಕೆ.ವಿ. ಮತ್ತು 33 ಕೆ.ವಿ. ಸ್ಟೇಷನ್‌ಗಳ ವಿವರಗಳು ಈ ಕೆಳಗಿನಂತಿವೆ

1) ಬಿಜಾಪುರ ತಾಲ್ಲೂಕು:

220 ಕೆವಿ.	ಇರುವುದಿಲ್ಲ.
110 ಕೆವಿ.	1. ಬಿಜಾಪುರ ನಗರ
	2. ಕೈಗಾರಿಕಾ ಪ್ರದೇಶ, ಬಿಜಾಪುರ
	3. ಮಮದಾಪುರ
33 ಕೆವಿ.	1. ತಿಕೋಟಾ
	2. ಬಬಲೇಶ್ವರ
	3. ಬೂತನಾಳ
	4 ತಿಡಗುಂದಿ
	5. ದೇವರಗೆನ್ನೂರ

2) ಬಸವನಬಾಗೇವಾಡಿ ತಾಲ್ಲೂಕು:

220 ಕೆವಿ.	ಬಸವನ ಬಾಗೇವಾಡಿ
110 ಕೆವಿ.	ನಿಡಗುಂದಿ
33 ಕೆವಿ.	ಮಲಘಾಣ

ಆ) ಬಿಜಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಮಂಜೂರಾಗಿರುವ 110 ಕೆ.ವಿ. ಸ್ಟೇಷನ್‌ಗಳು.

1. ತಿಕೊಟಾ.

2. ಶಿರಬೂರು.